## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಹೆಚ್.ಪಿ. ಸುಧಾಮ್ ದಾಸ್ ಇವರ ನಿಯಮ 72 ರಡಿ ಗಮನ ಸೆಳೆಯುವ ಸೂಚನೆ

**ವಿಷಯ:** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಕೆ.ಐ.ಎ.ಡಿ.ಬಿ. ಮಂಡಳಿಯಲ್ಲಿ ಹಂಚಿಕೆಗೆ ಲಭ್ಯವಿರುವ ಕೈಗಾರಿಕಾ ನಿವೇಶನಗಳಲ್ಲಿ 21-03-2009 ರಿಂದ 09-06-2022 ರವರೆಗೆ 22.65% ರಂತೆ ಮತ್ತು 09-06-2022 ರಿಂದ 24.10% ರಂತೆ ಹಂಚಿಕೆ ನಿಯಮಗಳನ್ನು ಪಾಲಿಸುತ್ತಿದ್ದರೆ 2009-2010 ರಿಂದ 2023-2024ರ ವರೆಗೆ ಪ್ರತಿಯೊಂದು ಯೋಜನೆಯಲ್ಲಿಯೂ ಪರಿಶಿಷ್ಟ ಸಮುದಾಯಗಳಿಗೆ ಹಂಚಿಕೆಯಾಗಿರುವ ಕೈಗಾರಿಕಾ ನಿವೇಶನಗಳ ವಿವರಗಳನ್ನು ಒದಗಿಸುವುದು. ಈ ಹಿಂದೆ ಡಾಬಸ್ ಪೇಟೆ 5ನೇ ಹಂತದಲ್ಲಿ ಒಟ್ಟು ಹಂಚಿಕೆ ಲಭ್ಯವಿರುವ ಕೈಗಾರಿಕಾ ನಿವೇಶನಗಳ ಮೀಸಲಾತಿ ನೀಡಿರುವ ವಿವರಗಳನ್ನು ಒದಗಿಸುವುದು ಇತ್ತೀಚೆಗೆ ದೇವನಹಳ್ಳಿ ಸಾಮಾನ್ಯ ಕೈಗಾರಿಕಾ ಪ್ರದೇಶದ ಜಾಹೀರಾತುವಿನಲ್ಲಿ ಒಟ್ಟು ಹಂಚಿಕೆ ಲಭ್ಯವಿರುವ ವಿಸ್ತೀರ್ಣದಲ್ಲಿ ಮೀಸಲು ಪ್ರಮಾಣ ನಿಗಧಿಪಡಿಸಿ ಜಾಹೀರಾತು ನೀಡಿಲ್ಲವಾದ್ದರಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಹಂಚಿಕೆಯಲ್ಲಿ ಅನ್ಯಾಯವಾಗಿರುವುದು ಸರಿಪಡಿಸಲು ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರನ್ನು ಗಮನ ಸೆಳೆಯ ಬಯಸುತ್ತೇನೆ.

***

**ಉತ್ತರ :**

- ದಿನಾಂಕ:21/03/2009 ರಂದು ನಡೆದ ಕೆ.ಐ.ಎ.ಡಿ.ಬಿ. ಮಂಡಳಿ ಸಭೆಯಲ್ಲಿ ಹೊಸದಾಗಿ ಅಭಿವೃದ್ಧಿಪಡಿಸುವ ಕೈಗಾರಿಕಾ ಪ್ರದೇಶಗಳಲ್ಲಿ ಹಂಚಿಕೆ ಪ್ರದೇಶದ ಶೇ.22.65% ರಷ್ಟು ಜಮೀನನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಹಂಚಿಕೆ ಮಾಡಲು ಕಾಯ್ದಿರಿಸಲು ನಿರ್ಣಯಿಸಲಾಗಿರುತ್ತದೆ. ಸದರಿ ನಿರ್ಣಯದನ್ವಯ ಮಂಡಳಿಯ ಕೈಗಾರಿಕಾ ಪ್ರದೇಶಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ನಿವೇಶನ ಮೀಸಲಿಟ್ಟು ಹಂಚಿಕೆ ಮಾಡಲಾಗುತ್ತಿದೆ.

- ಮುಂದುವರೆದು, ದಿನಾಂಕ:09-06-2022 ರಂದು ನಡೆದ 379ನೇ ಕೆಐಎಡಿ ಮಂಡಳಿ ಸಭೆಯಲ್ಲಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಮೀಸಲಾತಿ ಪ್ರಮಾಣವನ್ನು ಪರಿಷ್ಕರಿಸಿ ಶೇ.22.65 ರಿಂದ ಶೇ.24.10 ಕ್ಕೆ ನಿಗದಿಪಡಿಸಲು ನಿರ್ಣಯಿಸಲಾಗಿರುತ್ತದೆ. ಸದರಿ ನಿರ್ಣಯದ ದಿನಾಂಕದಿಂದ ಅನ್ವಯವಾಗುವಂತೆ ಹೊಸದಾಗಿ ಅಭಿವೃದ್ಧಿಪಡಿಸಲಾಗುತ್ತಿರುವ ಕೈಗಾರಿಕಾ ಪ್ರದೇಶಗಳಲ್ಲಿ ಹಂಚಿಕೆ ಪ್ರದೇಶದ ಶೇ.24.10 ರಷ್ಟು ಜಮೀನನ್ನು ಕಾಯ್ದಿರಿಸಲಾಗುತ್ತಿದೆ.

- ಮಂಡಳಿಯು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕಿನಲ್ಲಿ ದಾಬಸ್ ಪೇಟೆ 5ನೇ ಹಂತ ಕೈಗಾರಿಕಾ ಪ್ರದೇಶವನ್ನು 1040.30 ಎಕರೆ ಪ್ರದೇಶದಲ್ಲಿ ಬಲ್ಕ್ ಜಮೀನು ಹಂಚಿಕೆಗಾಗಿ ಅಭಿವೃದ್ಧಿಪಡಿಸಲು ದಿನಾಂಕ:17-06-2021ರ 373ನೇ ಮಂಡಳಿ ಸಭೆಯಲ್ಲಿ ಅನುಮೋದನೆ ನೀಡಿರುತ್ತದೆ. ತದನಂತರ, ಸಣ್ಣ ನಿವೇಶನಗಳ ಅವಶ್ಯವಿದ್ದ ಕಾರಣ, ಬ್ಲಾಕ್ ಸಂ: 2ಬಿ, 3 & 5 ರಲ್ಲಿನ 247.79 ಎಕರೆ ಜಮೀನಿನಲ್ಲಿ ಉಪ ಬಡಾವಣೆ ನಿರ್ಮಿಸಲು ದಿನಾಂಕ:24-8-2021ರ 374ನೇ ಮಂಡಳಿ ಸಭೆಯಲ್ಲಿ ಅನುಮೋದನೆ ನೀಡಿರುತ್ತದೆ. ಸದರಿ ಉಪಬಡಾವಣೆಯಲ್ಲಿ ಅಭಿವೃದ್ಧಿಪಡಿಸಿ ಲಭ್ಯವಾದ 150 ಎಕರೆ ಜಮೀನಿನ ನಿವೇಶನಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಹಂಚಿಕೆಗೆ ಮೀಸಲಿಡಲಾಗಿದೆ.

SLWOL-90
R-72.
15-2-24

- ಮುಂದುವರೆದು, ದಿನಾಂಕ:26-12-2023 ರಂದು ನಡೆದ 379ನೇ ಕೆಐಎಡಿ ಮಂಡಳಿ ಸಭೆಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ದೇವನಹಳ್ಳಿ ಸಾಮಾನ್ಯ ಕೈಗಾರಿಕಾ ಪ್ರದೇಶವನ್ನು 986.57 ಎಕರೆ ಪ್ರದೇಶದಲ್ಲಿ ಅಭಿವೃದ್ಧಿಪಡಿಸಲು ಪರಿಷ್ಕೃತ ವಿನ್ಯಾಸ ನಕ್ಷೆ -3 ಅನುಮೋದಿಸಿದ್ದು, ಸದರಿ ವಿನ್ಯಾಸ ನಕ್ಷೆಯಲ್ಲಿ 497.11 ಎಕರೆ ಜಮೀನನ್ನು ಬಲ್ಕ್ ಜಮೀನು ಹಂಚಿಕೆಗಾಗಿ ಗುರುತಿಸಲಾಗಿದೆ. ಸದರಿ ಕೈಗಾರಿಕಾ ಪ್ರದೇಶದಲ್ಲಿ ಬಲ್ಕ್ ಜಮೀನು ಹೊರತು 255 ಎಕರೆ ಹಂಚಿಕೆಗೆ ಲಭ್ಯವಾಗಿರುತ್ತದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಶೇ.24.10 ರಷ್ಟು 61.45 ಎಕರೆ ಜಮೀನನ್ನು ಮೀಸಲಿಡಲಾಗಿದೆ.

- ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಮಂಡಳಿಯು ದೇವನಹಳ್ಳಿ ಸಾಮಾನ್ಯ ಕೈಗಾರಿಕಾ ಪ್ರದೇಶದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ನಿಗಧಿಯಾಗಿರುವ ಶೇಕಡವಾರು ಪ್ರಮಾಣವನ್ನು ಕೈಗಾರಿಕಾ ನಿವೇಶನಗಳಿಗೆ ಲಭ್ಯವಾದ ಜಮೀನಿನಲ್ಲಿ ಮೀಸಲಿಡಲಾಗಿದೆ, ಆದುದರಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಯಾವುದೇ ಅನ್ಯಾಯವಾಗಿರುವುದಿಲ್ಲ.

**ಸಂಖ್ಯೆ: ಸಿಐ 107 ಐಎಪಿ 2024**

**(ಎಂ.ಬಿ.ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು